# 'ಎಲ್ಲ ಪಾತ್ರಗಳ ಅನುಭವ ನನ್ನದಾಗಬೇಕು'



**ರಂಗಭೂಮಿಯ ಕಲಿಕೆಯನ್ನು ಬೆನ್ನಿಗಿಟ್ಟುಕೊಂಡು ಸಿನಿಮಾರಂಗ ಪ್ರವೇಶಿಸಿರುವ ಅಶ್ವಿನಿ, ಎಲ್ಲಾ ಧಾಟಿಯ ಪಾತ್ರಗಳಲ್ಲೂ ತಮ್ಮನ್ನು ಪ್ರಯೋಗಿಸಿಕೊಳ್ಳಲು ಅಣಿಯಾಗಿದ್ದಾರೆ. 'ಭೀಮ' ಸಿನಿಮಾ ಮೂಲಕ ಕನ್ನಡ ಬೆಳ್ಳಿತೆರೆಗೆ ಅಡಿಯಿಡುತ್ತಿದ್ದು, ಭರವಸೆಯ ಭವಿಷ್ಯ ಆಶಿಸುತ್ತಿದ್ದಾರೆ.**

■ **ಸುಮಲತಾ ಎನ್**

ಈಚೆಗಷ್ಟೇ ನಟ ದುನಿಯಾ ವಿಜಯ್ ನಿರ್ದೇಶನದ 'ಭೀಮ' ತಂಡ, ಅದರ ನಾಯಕಿಯನ್ನು ಪೋಸ್ಟರ್ ಒಂದರ ಮೂಲಕ ಪರಿಚಯಿಸಿತ್ತು. ಸೊಂಟಕ್ಕೆ ಲಂಗ ಏರಿಸಿ, ಕೈಯಲ್ಲಿ ಕೋಳಿ ಹಿಡಿದು ಹಳ್ಳಿ ಸ್ಟೈಲ್‌ನಲ್ಲಿ ಕಾಣುತ್ತಿದ್ದ ನಟಿಯ ಪೋಸ್ಟರ್ ಮಾತ್ರವಲ್ಲ, ಹಿನ್ನೆಲೆಯೂ ಆಸಕ್ತಿದಾಯಕ ಎನಿಸಿತು.

ಅಂದಹಾಗೆ, 'ಭೀಮ' ಸಿನಿಮಾಗೆ ನಾಯಕ ನಟಿಯಾಗಿ, ಚಂದನವನಕ್ಕೆ ಹೊಸ ಮುಖವಾಗಿ ಪರಿಚಯವಾಗುತ್ತಿರುವುದು ಅಶ್ವಿನಿ. ರಂಗಭೂಮಿ ಹಿನ್ನೆಲೆ ಹೊಂದಿರುವ ಅವರು, ಅದನ್ನೇ ತಮ್ಮ ಪ್ರಯತ್ನಗಳಿಗೂ ಅಡಿಪಾಯವಾಗಿಸಿಕೊಂಡಿದ್ದಾರೆ.

ಬೆಂಗಳೂರಿನವರೇ ಆದ ಅಶ್ವಿನಿ ಓದಿದ್ದು ಎಂಬಿಎ. ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಕಾಲೇಜಿನಲ್ಲಿ ಬಿಬಿಎಂ ಓದಿ, ಬೆಂಗಳೂರು ವಿಶ್ವವಿದ್ಯಾಲಯದ ದೂರಶಿಕ್ಷಣದಲ್ಲಿ ಎಂಬಿಎ ಪೂರೈಸಿದ್ದಾರೆ. ಅನುಭವಕ್ಕೆಂದು ಕೆಲಸಕ್ಕೆ ಸೇರಿದರೂ ತಮ್ಮ ಕನಸನ್ನರಸಿಕೊಂಡು ನಟನೆಯೆಡೆಗೇ ವಾಲಿದರು.

'ಕೆಲಸಕ್ಕೆ ಸೇರಿದಾಗ ನಾನು ಮಾಡಬೇಕಾದ್ದು ಇದಲ್ಲ ಎಂದು ಪದೇ ಪದೇ ಅನಿಸುತ್ತಲೇ ಇತ್ತು. ಬೇರೇನನ್ನೋ ನಾನು ಹುಡುಕಬೇಕಿದೆ ಎನಿಸುತ್ತಿತ್ತು. ಕೆಲಸ ಮಾಡುವ ಜಾಗದಲ್ಲೇ, ರಂಗಭೂಮಿಯ ಒಡನಾಟವಿದ್ದ ನನ್ನ ಪರಿಚಯಸ್ಥರು, ರಂಗತಂಡವೊಂದರಲ್ಲಿ ನಟನಾ ತರಬೇತಿ ಅವಕಾಶದ ಕುರಿತು ಹೇಳಿದರು. ನಂತರ ನನ್ನ ಹಾದಿ ಹೊರಳಿದ್ದು ಥಿಯೇಟರ್ ತತ್ಕಾಲ್‌ಗೆ...' ನಟನೆಯ ಆರಂಭಿಕ ದಿನಗಳನ್ನು ಅಶ್ವಿನಿ ಹೀಗೆ ವಿವರಿಸಿದರು.

ತತ್ಕಾಲ್‌ಗೆ ಸೇರಿದ ಅವರು, 'ಅಭಿನಯ ತರಂಗ' ಸೇರಿದಂತೆ ಕೆಲ ರಂಗತಂಡಗಳ ನಾಟಕಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು. ತತ್ಕಾಲ್ ತಂಡ ಸೇರಿ ಮೂರೂವರೆ ವರ್ಷಗಳಲ್ಲಿ ಹಲವರ ಒಡನಾಟ, ಬಹಳಷ್ಟು ಹೊಸತುಗಳನ್ನು ಕಂಡರು.

'ಅದೇನೋ ಗೊತ್ತಿಲ್ಲ, ಸಣ್ಣ ವಯಸ್ಸಿನಲ್ಲಿದ್ದಾಗ, ನನ್ನನ್ನು ಯಾರಾದರೂ ನೀನು ಏನಾಗುತ್ತೀಯ ಎಂದು ಕೇಳಿದರೆ, ನಟಿಯಾಗುತ್ತೇನೆ ಎಂದುಬಿಡುತ್ತಿದ್ದೆ. ನಟಿ ಎಂದರೇನು, ಸಿನಿಮಾ ಅಂದರೇನು ಅವೆಲ್ಲಾ ಏನೂ ಗೊತ್ತಿಲ್ಲದಿದ್ದರೂ ಈ ಉತ್ತರ ಕೊಡುತ್ತಿದ್ದೆ. ಆದರೆ ನನಗೇ ಗೊತ್ತಿಲ್ಲದಂತೆ ಆ ಆಸೆ ನನ್ನೊಂದಿಗೇ ಬೆಳೆದುಬಿಟ್ಟಿದೆ. ನಟನೆಯನ್ನೇ ಗಂಭೀರವಾಗಿ ತೆಗೆದುಕೊಳ್ಳಬೇಕು ಎಂದು ಒಮ್ಮೆ ನಿರ್ಧರಿಸಿದೆ. ಆಗಿನಿಂದ ಅದಕ್ಕೆ ತಕ್ಕ ತಯಾರಿ ಮಾಡಿಕೊಳ್ಳಲು ಆರಂಭಿಸಿದೆ' ಎನ್ನುತ್ತಾರೆ ಅಶ್ವಿನಿ.

ನಟನೆಯನ್ನು ವೃತ್ತಿಪರವಾಗಿ ಕಲಿಯಬೇಕೆಂಬ ಗಟ್ಟಿನಿರ್ಧಾರದೊಂದಿಗೆ ರಂಗಭೂಮಿ ಆರಿಸಿಕೊಂಡ ಅಶ್ವಿನಿ ಅವರಿಗೆ, ಇದ್ದರೆ ಇಲ್ಲೇ ಇರಬೇಕು. ಇಲ್ಲೇ ತಮ್ಮ ಗುರುತು ಮೂಡಿಸಿಕೊಳ್ಳಬೇಕು ಎಂಬ ಸ್ಪಷ್ಟತೆ ಇದ್ದದ್ದು, ದಾರಿಯನ್ನು ತಿಳಿಯಾಗಿಸಿತ್ತು.

ರಂಗಭೂಮಿ ತಮಗೆ ತಕ್ಕ ತರಬೇತಿ ಕೊಟ್ಟಿದೆ ಎನ್ನುವ ಅವರು, 'ಕಲಿಕೆ ನಿರಂತರ. ರಂಗಭೂಮಿಯಲ್ಲಿ ಕಲಿತುಕೊಂಡೆ ಎನ್ನುವುದಕ್ಕಿಂತ ದಿನದಿನವೂ ಒಂದಷ್ಟು ತಿಳಿದುಕೊಳ್ಳುತ್ತಾ ಬಂದೆ ಎನ್ನಬಹುದು. ಒಂದು ಪಾತ್ರವನ್ನು ಹೇಗೆ ಕಟ್ಟಿಕೊಳ್ಳಬೇಕು ಎಂಬುದಷ್ಟೇ ಅಲ್ಲ, ಪಾತ್ರದ ಹೊರಗಿನ ನಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳುವುದು ಹೇಗೆಂಬ ಸ್ಪಷ್ಟತೆಯನ್ನೂ ರಂಗಭೂಮಿ ಕೊಟ್ಟಿದೆ' ಎಂದು ಮನಸಾರೆ ಸ್ಮರಿಸುತ್ತಾರೆ.

ರಂಗಭೂಮಿಯ ಸಖ್ಯ ಧಾರಾವಾಹಿಗಳಲ್ಲಿ ನಟಿಸುವ ಅವಕಾಶ ನೀಡಿತ್ತು. ಟಿ.ಎನ್. ಸೀತಾರಾಮ್ ನಿರ್ದೇಶನದ 'ಮಗಳು ಜಾನಕಿ' ಹಾಗೂ ಬಿ. ಸುರೇಶ್ ಅವರ 'ಜೀವನದಿ' ಧಾರಾವಾಹಿಯಲ್ಲಿ ನಟಿಸಿದರು. ಕೊರೊನಾ ಕಾರಣ ಎರಡು ಧಾರಾವಾಹಿಗಳೂ ನಿಂತವು. ಖಾಲಿ ಕೈಯಲ್ಲಿ ಹಿಂದಿರುಗದೇ ಕಿರುತೆರೆಯ ಒಂದಿಷ್ಟು ಅನುಭವಗಳನ್ನೂ ತಮ್ಮೊಂದಿಗೆ ತಂದರು.ಓದುವ ಹವ್ಯಾಸವೂ ಅಶ್ವಿನಿ ಅವರಿಗಿದೆ. 'ಕನ್ನಡ, ಇಂಗ್ಲಿಷ್‌ನ ಕಥೆ, ಕಾದಂಬರಿಗಳನ್ನು ಓದುತ್ತೇನೆ. ನನ್ನನ್ನು ಒಮ್ಮೊಮ್ಮೆ ತುಂಬಾ ಪ್ರಶ್ನೆಗಳು ಕಾಡುತ್ತವೆ. ಅದಕ್ಕೆ ಉತ್ತರಗಳನ್ನು ಪುಸ್ತಕದಲ್ಲಿ ಕಂಡುಕೊಳ್ಳುತ್ತೇನೆ. ಇದು ಆಲೋಚನಾ ಕ್ರಮವನ್ನೇ ಬದಲಿಸುತ್ತದೆ' ಎನ್ನುವ ಅವರಿಗೆ ಕನ್ನಡದಲ್ಲಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ, ಸಾಯಿಸುತೆ ಅವರ ಪುಸ್ತಕಗಳು ತುಂಬಾ ಇಷ್ಟ.

ಸಿನಿಮಾ, ನಾಟಕಗಳನ್ನು ನೋಡುತ್ತಾ, ತಮ್ಮಿಷ್ಟದ ದೃಶ್ಯ, ಪಾತ್ರಗಳ ಬಗ್ಗೆ ತಿಳಿದವರೊಂದಿಗೆ ಚರ್ಚೆ ಮಾಡುವುದು ಅವರ ಅಭ್ಯಾಸ.

ಪಾತ್ರಗಳು ಪ್ರಯೋಗಮುಖಿಯಾಗಿರಬೇಕು ಎನ್ನುವುದು ಅಶ್ವಿನಿ ಆಶಯ. 'ಎಲ್ಲಾ ಧಾಟಿಯ ಪಾತ್ರಗಳನ್ನೂ ಪ್ರಯೋಗಿಸಬೇಕು. ಯಾವ ರೀತಿಯ ಪಾತ್ರ ಮಾಡಬೇಕು ಎನ್ನುವುದಕ್ಕಿಂತ ಯಾವ ಪಾತ್ರವನ್ನೂ ಬಿಡಬಾರದೆನ್ನುವುದು ನನ್ನಾಸೆ. ಆ ಎಲ್ಲಾ ರೀತಿಯ ಪಾತ್ರಗಳು ನೀಡುವ ಅನುಭವಗಳೂ ನನ್ನದಾಗಬೇಕು' ಎಂದು ಉತ್ಸುಕರಾಗುತ್ತಾರೆ.

'ಸಿನಿಮಾ ರಂಗಕ್ಕೆ ಬರುವುದು ನನಗೆ ಕನಸಿನಂತಿತ್ತು. ಈ ದೊಡ್ಡ ಕನಸು ನನಸಾಗಿದೆ. ಇದರ ನಂತರ ಮತ್ತೊಂದು ಕನಸು ಶುರುವಾಗಬಹುದು. ಅದರ ನಂತರ ಮಗದೊಂದು... ಕನಸುಗಳು ಎಂದಿಗೂ ಚಿಕ್ಕದಾಗುವುದಿಲ್ಲ. ಈ ವಿಷಯದಲ್ಲಿ ನಾನು ಹೆಚ್ಚು ಸ್ವಾರ್ಥಿ' ಎಂದು ನಗುತ್ತಾರೆ.

ಪುಸ್ತಕ ಬಿಡುಗಡೆ ಕಾರ್ಯಕ್ರಮವೊಂದಕ್ಕೆ ಬಂದಿದ್ದ ದುನಿಯಾ ವಿಜಯ್, ಅಶ್ವಿನಿ ಅವರನ್ನು ಕಂಡು ಭೀಮ ಸಿನಿಮಾ ಬಗ್ಗೆ ಪ್ರಸ್ತಾಪಿಸಿದ್ದಾರೆ. ಹೊಸ ಮುಖ ಹುಡುಕುತ್ತಿದ್ದ ಅವರಿಗೆ ರಂಗಭೂಮಿ ಹಿನ್ನೆಲೆಯ ಅಶ್ವಿನಿ ಚಿತ್ರಕ್ಕೆ ಚೆನ್ನಾಗಿ ಒಪ್ಪುತ್ತಾರೆ ಎನಿಸಿದೆ. ಆದರೆ ಸಿನಿಮಾದಲ್ಲಿನ ತಮ್ಮ ಪಾತ್ರದ ಬಗ್ಗೆ ಮಾತ್ರ ಅಶ್ವಿನಿ ಗುಟ್ಟುಬಿಟ್ಟುಕೊಟ್ಟಿಲ್ಲ. ■